ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/06/ಇಸಿಎಸ್(1)/2016

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ಅರಮನೆ ರಸ್ತೆ, ಬೆಂಗಳೂರು -01
ದಿನಾಂಕ: 03-04-2017

ಸುತ್ತೋಲೆ

ವಿಷಯ: 2017 ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷಾ ಕಾರ್ಯಗಳ ಸಂಬಂಧ ರಜಾ ಮಂಜೂರಾತಿ ಮಾಡದಿರಲು ಹಾಗೂ ಪರೀಕ್ಷಾ ಕಾರ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ:ಇಡಿ 57 ಟಿಪಿಇ 2013 ದಿನಾಂಕ;17-4-2015

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017 ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳು **ದಿನಾಂಕ**: 13-04-2017 ರಿಂದ ಪ್ರಾಯೋಗಿಕ ಮತ್ತು **ದಿನಾಂಕ: 27-04-2017** ರಿಂದ ಥಿಯರಿ ಪರೀಕ್ಷೆಗಳು ಹಾಗೂ ತತ್ಸಂಬಂಧವಾದ ಮೌಲ್ಯಮಾಪನ ಕಾರ್ಯಗಳು ಆರಂಭಗೊಳ್ಳಲಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಪ್ರಾರಂಭದ ದಿನದಿಂದ ಪರೀಕ್ಷೆಗಳು ಮುಗಿಯುವ ದಿನಗಳವರೆಗೂ ಮತ್ತು ಮೌಲ್ಯಮಾಪನ /ಮರುಮೌಲ್ಯಮಾಪನಗಳ ಅವಧಿಗಳಲ್ಲಿ ಪ್ರಾಂಶುಪಾಲರು ಸ್ವತ: ಸಾಂದರ್ಭಿಕ/ ಪರಿವರ್ತಿತ/ಗಳಿಕೆ ರಜೆ ಸೇರಿದಂತೆ ಯಾವುದೇ ರಜೆ ಪಡೆಯದಂತೆ ಹಾಗೂ ಬೋಧಕ/ ಬೋಧಕೇತರ ಸಿಬ್ಬಂದಿಯವರಿಗೆ ಸದರಿ ರಜೆಗಳನ್ನು ಮಂಜೂರು ಮಾಡಬಾರದೆಂದು ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ಮಾತ್ರ ನಿರ್ದೇಶಕರ ಪೂರ್ವಾನುಮತಿ ಪಡೆದು ಕ್ರಮಕೈಗೊಳ್ಳಲು ತಿಳಿಸಲಾಗಿದೆ.

ಪರೀಕ್ಷಾ ಕಾರ್ಯಗಳಿಗೆ ನಿಯೋಜಿಸಲ್ಪಟ್ಟ ಎಲ್ಲಾ ಅಧಿಕಾರಿಗಳು/ಉಪನ್ಯಾಸಕರು/ಸಿಬ್ಬಂದಿಯವರು ಕಡ್ಡಾಯವಾಗಿ ಕರ್ತವ್ಯ ನಿರ್ವಹಿಸತಕ್ಕದ್ದು. ಸದರಿ ಪರೀಕ್ಷಾ ಕಾರ್ಯಗಳ ಬದಲಾವಣೆ/ವಿನಾಯಿತಿ ಇತ್ಯಾದಿಗಳನ್ನು ಕೋರಿ ಕಾರ್ಯದರ್ಶಿಯವರನ್ನು ಖುದ್ದಾಗಿ/ದೂರವಾಣಿ ಮೂಲಕವಾಗಲಿ ಸಂಪರ್ಕಿಸಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ತುರ್ತು ಸಂದರ್ಭಗಳಲ್ಲಿ ಮಾತ್ರ ಸಂಸ್ಥೆಯ ಪ್ರಾಚಾರ್ಯರಿಂದ ದೃಢೀಕರಿಸಲಾದ ಮನವಿಗಳನ್ನು ಮಾತ್ರ ಮಂಡಳಿಗೆ ಸಲ್ಲಿಸಲು ತಿಳಿಸಲಾಗಿದೆ. ಪ್ರಾಂಶುಪಾಲರುಗಳು ಸದರಿ ಮನವಿಗಳ ನೈಜತೆ ಹಾಗೂ ಅಗತ್ಯತೆಯನ್ನು ಪರಿಶೀಲಿಸಿ, ದೃಢೀಕರಿಸಿದ ನಂತರ ಮಂಡಳಿಗೆ ರವಾನಿಸಲು ತಿಳಿಸಲಾಗಿದೆ. ಯಾವುದೇ ಸಿಬ್ಬಂದಿ ವರ್ಗದವರು ಪರೀಕ್ಷಾ ಕೆಲಸಗಳಿಂದ ವಿನಾಯಿತಿ ಕೋರಿ ನೇರವಾಗಿ ಮಂಡಳಿಯನ್ನು ಸಂಪರ್ಕಿಸಿದ ಪಕ್ಷದಲ್ಲಿ ಅಂತಹವರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ನಿರ್ದೇಶಕರು

ಇವರಿಗೆ,
ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:
1. ಕಂಪ್ಯೂಟರ್ ವಿಭಾಗಕ್ಕೆ - ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ -ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ನಿರ್ದೇಶಕರ ಆಪ್ತ ಶಾಖೆ
4. ಕಾರ್ಯದರ್ಶಿಯವರ ಆಪ್ತಶಾಖೆ
5. ಕಡತಕ್ಕೆ.